**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್  131/2018**

ಡಿ  ಡಬ್ಲ್ಯೂ -1

**ದಿನಾಂಕ 20-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ  ಪಾಟೀ ಸವಾಲು ಶ್ರೀ ಕೆ.ಎನ್ ಎಸ್  ವಾದಿ ಪರ ವಕೀಲರುಃ**

ಕೆಲವು ಸ್ವತ್ತುಗಳನ್ನು ಪ್ರತಿವಾದ ಪತ್ರದಲ್ಲಿ ಸ್ವಯಾರ್ಜಿತ ಸ್ವತ್ತುಗಳು ಎಂದು ನಮೂದಿಸಿದ್ದೇನೆ ಎಂದರೆ ಸರಿ.  ನಮ್ಮ ತಾಯಿ  ಸದರಿ ಜಮೀನುಗಳ ಆಸ್ತಿಗಳನ್ನು  ನಮ್ಮ ತಂದೆಯ  ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ.  ಸದರಿ ಕ್ರಯ ಪತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ನಮ್ಮ ತಂದೆಯ ಹೆಸರು ಸಣ್ಣಮಲ್ಲೇಗೌಡ. ನಾನು ನ್ಯಾಯಾಲಯಕ್ಕೆ ನಿಡಿ-1 ನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿ.

**2.** ನಿಡಿ-1 ಸಣ್ಣಮ್ಮನವರಿಗೆ ಆದ ಕ್ರಯ ಪತ್ರ ಎಂದರೆ ಸರಿ. ನಾನು ಸದರಿ ನಮ್ಮ ತಾಯಿ ನಮ್ಮ ತಂದೆಯ ಹೆಸರಿನಲ್ಲಿ ಖರೀದಿಸಿರುವ ಕ್ರಯ ಪತ್ರಗಳನ್ನು  ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ.  ನ್ಯಾಯಾಲಯಕ್ಕೆ  ಸಲ್ಲಿಸಿರುವ ಸರ್ವೇ ನಂಬರ ಮತ್ತು ಕ್ರಯದಾರರು ಬೇರೆ ಬೇರೆ ಎಂದರೆ ಸರಿ. ದಾವೆಯಲ್ಲಿ ಪಿತ್ರಾರ್ಜಿತ ಸ್ವತ್ತುಗಳನ್ನು ಸೇರಿಸಿರುವುದಿಲ್ಲ.  ಸರ್ವೇ ನಂಬರ 92, 94 ಮತ್ತು  96 ವರೆಗಿನ ಸರ್ವೆ ನಂಬರಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

**3**. ದಾವೆಯಲ್ಲಿ ಸೇರಿಸದೇ ಇರುವ ಜಮೀನುಗಳ ದಾಖಲಾತಿಗಳನ್ನು ನೀಡಿರುವುದಿಲ್ಲ. ಸರ್ವೆ ನಂಬರ 94/5 ರಲ್ಲಿ ನಮ್ಮ ತಾತ ಮತ್ತು ನಮ್ಮ ತಂದೆಗೆ ಸೇರಿದ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ 92  ಮತ್ತು 96 ಜಮೀನುಗಳು ಕಾಳಮ್ಮನ ಕೊಪ್ಪಲಿನಲ್ಲಿರುವ ಜಮೀನುಗಳ ದಾಖಲೆಗಳನ್ನು ನಾನುನೀಡಿಲ್ಲ ಎಂದರೆ ಸರಿ.  ಒಂದು ವೇಳೆ ಸರ್ವೆ ನಂಬರ 92, 94 ಮತ್ತು 96 ರಲ್ಲಿ ಜಮೀನುಗಳು ನಮ್ಮ ಕುಟುಂಬದವರ ಹೇಸರಿನಲ್ಲಿ ಇದ್ದರೆ ನಾನು ಅವುಗಳನ್ನು ಸಲ್ಲಿಸುತ್ತಿದ್ದೇ ಎಂದರೆ ಸರಿ.

**4**. ಸರ್ವೇ ನಂಬರ 92, 94 ಮತ್ತು 96 ಕಾಳಮ್ಮನ ಕೊಪ್ಪಲು ಎಲ್ಲೆಯಲ್ಲಿ ಇರದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಸಲ್ಲಿಸಿರುವ ಷೆಡ್ಯೂಲ್ ಸ್ವತ್ತುಗಳನ್ನು ಹೊರತು ಪಡಿಸಿ ಬೇರೆ ಯಾವ ಸ್ವತ್ತುಗಳು ನಮ್ಮ ತಂದೆ ಹಾಗೂ ತಾತನ ಹೆಸರಿನಲ್ಲಿ ಇರುವುದಿಲ ಎಂದರೆ ಸರಿಯಲ್ಲ. ವಾದಿಯವರಿಗೆ ಸೇರಿದ ಪಿಪತ್ರಾರ್ಜಿತ ಆಸ್ತಿಗಳಲ್ಲಿನ ಭಾಗಾಂಶವನ್ನು ಕೊಡದೇ ತಪ್ಪಿಸುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರವನುನ ಸಲ್ಲಿಸಿ ಸುಳ್ಳು ಪ್ರಮಾಣ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ